ಓ.ಎಸ್ ನಂ. 132/2020

ಪಿ. ಡಬ್ಲ್ಯೂಃ 1

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 12-01-2026 ರಂದು ಬೊಧಿಸಲಾಯಿತು.**

**(ಸಾಕ್ಷಿದಾರರರಿಗೆ ಕನ್ನಡ ಬರುತ್ತಿಲ್ಲವಾಗಿದ್ದು ಕೊಂಕಣಿ ಭಾಷೆ ಬಲ್ಲವರಾಗಿದ್ದು ಶ್ರೀಮತಿ ಗುಣಲಕ್ಷ್ಮಿ ವಕೀಲರು ಸಾಕ್ಷಿ ಕೊಂಕಣಿಯಲ್ಲಿ ಹೇಳಿದ್ದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಹೇಳುವುದಾಗಿ ಪ್ರಮಾಣ ವಚನ ಸ್ವೀಕರಿಸಿ ಸಾಕ್ಷಿ ಕೊಂಕಣಿಯಲ್ಲಿ ಹೇಳಿದ ಸಾಕ್ಷ್ಯವನ್ನು ಸದ್ರಿಯವರು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಿದ್ದನ್ನು ರೆಕಾರ್ಡ್ ಮಾಡಿಕೊಳ್ಳಲಾಯಿತು)**

**<u>ಪಾಟೀ ಸವಾಲುಃ ಶ್ರೀ ವಿ ಎ ಟಿ ನ್ಯಾಯವಾದಿರವರಿಂದಃ</u>**

ಪ್ರತಿವಾದಿ 1 ರಿಂದ 3 ನನ್ನ ಮಕ್ಕಳು ಎಂದರೆ ಸರಿ. ಪ್ರತಿವಾದಿ 4 , 5 ಮತ್ತು 7 ರವರು ನನ್ನ ಗಂಡನ ತಮ್ಮಂದಿರು ಇರುತ್ತಾರೆ. ಪ್ರತಿವಾದಿ 6 ನನ್ನ ಗಂಡನ ತಂಗಿ ಇರುತ್ತಾರೆ. ನಾನು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ವಾಂಟಣಿ ಮಾಡುವ ಸಲುವಾಗಿ ಯಾವತ್ತೂ ಉಪ ನೋಂದಣಾಧಿಕಾರಿಗಳ ಕಚೇರಿಗೆ ಹೋಗಿರುವುದಿಲ್ಲಾ. ದಿನಾಂಕಃ 03.03.2016 ರಂದು ನಾನು ಉಪನೊಂದಣಾಧಿಕಾರಿಗಳ ಕಚೇರಿಗೆ ತೆಳಳಿ ವಾಂಟಣಿ ಪತ್ರ ಮಾಡಿರುವುದಿಲ್ಲಾ ಎಂದರೆ ಸರಿ. ಸದರಿ ವಾಂಟಣಿ ಪತ್ರ / ನಿ.ಡಿ.15 ದಲ್ಲಿ ಏನು ಬರೆದಿರುತ್ತದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲಾ ಎಂದರೆ ಸರಿ. ದಾವಾ ಆಸ್ತಿಯನ್ನು 5 ನೇ ಪ್ರತಿವಾದಿಯು ತನ್ನ ಹೆಸರಿಗೆ ಮಾಡಿಕೊಂಡ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲಾ. ಸದರಿ 5 ನೇ ಪ್ರತಿವಾದಿಯು ನನ್ನನ್ನು ಕರೆದು ಅವರೇ ತನ್ನ ಹೆಸರಿಗೆ ಆಸ್ತಿಯನ್ನು ಮಾಡಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ನನ್ನ ಸ್ವಃ ಖುಷಿಯಿಂದ 5 ನೇ ಪ್ರತಿವಾದಿಗೆ ಆಸ್ತಿಯನ್ನು ಮಾಡಿಕೊಟ್ಟಿರುವುದಿಲ್ಲಾ ಎಂದರೆ ಸರಿ. ನಿ.ಡಿ.15 ಒಂದು ಖೊಟ್ಟಿ ವಾಂಟಣಿ ಪತ್ರ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನನಗೆ ಹಕ್ಕಿರುತ್ತದೆ ಎಂದರೆ ಸರಿ. 8 ನೇ ಪ್ರತಿವಾದಿಗೆ 5 ನೇ ಪ್ರತಿವಾದಿ ಬರೆದುಕೊಟ್ಟ ಖರೀದಿ ಪತ್ರವು ಖೊಟ್ಟಿ ಖರೀದಿ ಪತ್ರ ಎಂದರೆ ಸರಿ.

**ಮರು ವಿಚಾರಣೆಃ - ಇಲ್ಲ -**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಕಾರವಾರ**

ಓ.ಎಸ್ ನಂ. 132/2020

ಪಿ. ಡಬ್ಲ್ಯೂ: 1